ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕಾನೂನು ಚೌಕಟ್ಟಿನಲ್ಲೇ ಹೋಗುತ್ತೇನೆಂದು ಮಾನ್ಯ ಸದನದ ನಾಯಕರು ಹೇಳಿದರೆ ಆಗಬಹುದು.

ಉಪಾಧ್ಯಕ್ಷಿಣಿಯವರು : ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಯಡಿಯೂರಪ್ಪನವರೇ ನಾನು ವಿವರಗಳನ್ನೆಲ್ಲಾ ಕೊಟ್ಟಿದ್ದೇನೆ. ಈ ವಿವರಣೆಯಲ್ಲಿ ಮತ್ತೆ ಏನಾದರೂ ಅನುಮಾನವಿದ್ದರೆ ಹೆಚ್.ಯು.ಡಿ. ಡಿಮ್ಯಾಂಡ್ ಮೇಲೆ ಡಿಸ್‌ಕಷನ್ ಇದೆ. ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡತಕ್ಕಂಥ ಹಕ್ಕು ತಮಗೆ ಇದೆ. ಅದನ್ನು ತಾವು ಮಾಡಬಹುದು. ಅದು ನಿಮಗೆ ಬಿಟ್ಟಿರತಕ್ಕಂಥ ವಿಚಾರ. ಆಗ ವಿವರವಾಗಿ ಉತ್ತರವನ್ನು ಕೊಡುವುದಕ್ಕೆ ಬರುತ್ತದೆಂದು ನಿಮಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಹೈಕೋರ್ಟ್ ಆದೇಶದ ಪ್ರಕಾರ ಜಮೀನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇಡೀ ರಾಜ್ಯದ ಜನತೆ ಇದನ್ನು ಓದಿದ್ದಾರೆ. ನೀವು ಹೈಕೋರ್ಟ್ ಡೈರೆಕ್ಷನ್ ಪ್ರಕಾರ ಕೊಟ್ಟಿದ್ದಿರೋ ಇಲ್ಲವೋ ಅದನ್ನು ನಮ್ಮ ರಾಜ್ಯದ ಜನತೆ ತಿಳಿದುಕೊಳ್ಳತಕ್ಕಂಥದ್ದು ಅಗತ್ಯವಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಪತಿಯವರೇ ಶ್ರೀಮಾನ್ ರಾಣೆಯವರು ಏನೋ ಒಂದು ವಿಚಾರ ಹೇಳಿರತಕ್ಕಂಥದ್ದು ಅದು ರೆಕಾರ್ಡಿಗೆ ಹೋಗಿಬಿಟ್ಟಿದೆ. ದಯವಿಟ್ಟು ಒಂದು ವಿಚಾರವನ್ನು ಅವರು ತಿಳಿದುಕೊಳ್ಳಬೇಕು. ಡೀನೋಟಿಫೈ ಮಾಡಿಲ್ಲ ಎನ್ನತಕ್ಕಂಥ ಮಾತನ್ನು ಪದೇ ಪದೇ ನಾನು ಹೇಳುತ್ತಿದ್ದೇನೆ. ಯಾರೋ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಲಿಲ್ಲ ಈಗ ನಾವು ಮಾಡಿದ್ದೇವೆ ನಮ್ಮ ಧೈರ್ಯವನ್ನು ಮೆಚ್ಚಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ರಾಣೆಯವರು ಹೇಳಿರತಕ್ಕಂಥದ್ದು ಈಗ ರೆಕಾರ್ಡ್‌ಗೆ ಹೋಗಿಬಿಟ್ಟಿದೆ. ಈ ವಿಷಯದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ. ಡೀನೋಟಿಫೈ ನಾವು ಮಾಡಿಲ್ಲವೆನ್ನತಕ್ಕಂಥ ಮಾತನ್ನು ಹೇಳಿದಮೇಲೆ ಮತ್ತೆ ಮೊಗಂ ಆಗಿ ಧೈರ್ಯ ಮೆಚ್ಚಬೇಕೆಂದರೆ ಅರ್ಥವಿದೆಯೇ ಇಲ್ಲಿ ಮೂಲ ಪ್ರಶ್ನೆ ಅವಶ್ಯಕವಾಗಿ ಮಾನ್ಯ ಸದಸ್ಯರು ಯಾರೇ ಇರಬಹುದು, ಅವರು ಈ ಕೃತ್ಯವನ್ನು ಈಚೆಗೆ ಎಳೆಯತಕ್ಕಂಥದ್ದಲ್ಲ. ಅವರಿಗೆ ಗೌರವತರಬೇಕಾದ ಮಾತನಾಡಬೇಕಾದರೆ ಇದು ಒಳ್ಳೆಯದಲ್ಲ. ಡೀನೋಟಿಫೈ ಮಾಡಿದ್ದಾರೆ, ಮೆಚ್ಚಬೇಕೆನ್ನತಕ್ಕಂಥ ಮಾತನಾಡಿದರೆ, ಸ್ವಲ್ಪ ಸ್ವಡಿಮಾಡಿ ಮಾತನಾಡುವುದನ್ನು ಕಲಿತರೆ ಶೋಭೆ. ಇಲ್ಲದಿದ್ದರೆ ಅವರು ಈ ರೀತಿ ಮಾತನಾಡತಕ್ಕಂಥದ್ದನ್ನು ನಿಲ್ಲಿಸತಕ್ಕಂಥದ್ದು ಬಹಳ ಒಳ್ಳೆಯದು.

(ಗೊಂದಲ)

334ನೇ ನಿಯಮದ ಮೇರೆಗೆ

ಮಾಗಡಿ ತಾಲ್ಲೂಕು ಮಾಡಬಾಳ ಹೋಬಳಿಯಲ್ಲಿ ಕೆಲವರು ಸರ್ಕಾರ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಗುಡಿಸಲು ಕಟ್ಟಿರುವುದನ್ನು ತೆಗೆಸಲು ಸರ್ಕಾರದ ಕ್ರಮ

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿಯಲ್ಲಿ ಮಂಚನಬೆಲೆ ನೀರಾವರಿ ಯೋಜನೆಯ ನಡೆಯುತ್ತಿದ್ದು ಅಲ್ಲಿನ ರೈತರಿಗಾಗಿ ಪುನರ್ವಸತಿ ಮಾಡಲು ಹಲವು ಕಾರ್ಯಕ್ರಮ ಹಾಕಿಕೊಂಡಿದ್ದು ಇನ್ನೂ ಪೂರ್ಣಗೊಂಡಿಲ್ಲದಿರುವುದು ಹಾಗೂ ಅಲ್ಲಿನ ಕೆಲವರು ಸರ್ಕಾರ ವಶಪಡಿಸಿಕೊಂಡಿರುವ ಜಮೀನಿನಲ್ಲಿ ಗುಡಿಸಲುಗಳನ್ನು ಹಾಕಲು ಮುಂದಾಗಿದ್ದು ಅವುಗಳು

ಅಲ್ಲಿ ತಲೆ ಎತ್ತಿದರೆ ಮತ್ತೆ ಅಲ್ಲಿ ಒಂದು ಊರು ಆಗುವ ಸಾಧ್ಯತೆ ಇರುವುದರಿಂದ ಆ ಗುಡಿಸಲುಗಳನ್ನು ತೆಗೆಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಈ ಸೂಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಬೆಂಗಳೂರು ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿಯ ಮಂಚನಬೆಲೆ ಗ್ರಾಮದಲ್ಲಿ ಮಂಚನಬೆಲೆ ನೀರಾವರಿ ಜಲಾಶಯವನ್ನೂ ಕಟ್ಟಿತಿದ್ದು ಸದರಿ ಜಲಾಶಯದ ಮಂಚನಬೆಲೆ ಛವೇರಹಳ್ಳಿ ಮತ್ತು ವಡೇರಹಳ್ಳಿ ಗ್ರಾಮಗಳು ಮುಳುಗಡೆಯಾಗಿರುತ್ತವೆ. ಈ ಮುಳುಗಡೆಯಿಂದ ತೊಂದರೆಗೊಳಗಾದ ಈ ಮೂರು ಗ್ರಾಮಗಳ ನಿರಾಶ್ರಿತರಿಗೆ ಚೋಳನಾಯಕನಹಳ್ಳಿ, ಕೋಲೂರು ಮತ್ತು ಕಡಬಗೆರೆ ಗ್ರಾಮದಲ್ಲಿ ಮರುವಸತಿಯನ್ನು ಕಲ್ಪಿಸಲಾಗಿದ್ದು, ನಿರಾಶ್ರಿತರ ಪೈಕಿ, ಅವೇರಹಳ್ಳಿ ಗ್ರಾಮಕ್ಕೆ ಸೇರಿದ ನಾಲ್ಕು ನಿರಾಶ್ರಿತ ಕುಟುಂಬಗಳು ಮರು ವಸತಿ ಸೌಲಭ್ಯವನ್ನು ಪಡೆದೂ ಸಹ ಹಳೆಯ ಮನೆಗಳನ್ನು ತೆರವು ಮಾಡಲು ನಿರಾಕರಿಸುತ್ತಿದ್ದಾರೆ. ಆದಾಗಿ ಬೇರೆಯವರು ಸಹ ಅಕ್ಕಪಕ್ಕಗಳಲ್ಲಿ ಗುಡಿಸಲುಗಳನ್ನು ಹಾಕುವ ಸಾಧ್ಯತೆ ಇದೆ. ಆದರೆ ಸಧ್ಯದಲ್ಲಿ ಯಾರೂ ಗುಡಿಸಲುಗಳನ್ನು ಹಾಕಿರುವುದಿಲ್ಲ. ಈ ನಾಲ್ಕು ಕುಟುಂಬಗಳನ್ನು ಸ್ಥಳದಿಂದ ತೆರವು ಮಾಡಿಸಿದ್ದಲ್ಲಿ ಬೇರೆ ಯಾರೂ ಹೊಸದಾಗಿ ಗುಡಿಸಲುಗಳನ್ನು ಹಾಕುವ ಪ್ರಶ್ನೆಯೇ ಉದ್ಭವಿಸುವುದಿಲ್ಲವಾಗಿ ಮೇಲ್ಕಂಡ ನಾಲ್ಕು ಕುಟುಂಬಗಳನ್ನು ತೆರವು ಮಾಡಿಸಲು ಕ್ರಮ ಜರುಗಿಸಲಾಗುತ್ತದೆ.

2) ಮಂಡ್ಯ ಜಿಲ್ಲೆಯ ರೈತರು ಸ್ವಂತವಾಗಿ ಬೆಳೆದಿರುವ ಕಬ್ಬಿನ ಫಸಲಿಗೆ ಪರ್ಯಾಯ ವ್ಯವಸ್ಥೆ ಹಾಗೂ ವೈಜ್ಞಾನಿಕವಾಗಿ ಕನಿಷ್ಟ ಬೆಂಬಲ ಬೆಲೆ ಶೀಘ್ರವಾಗಿ ನಿಗದಿ ಮಾಡುವುದು.

ಶ್ರೀ ಎನ್. ತಮ್ಮಣ್ಣ : ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಪ್ರಮುಖವಾದ ಬೆಳೆ ಕಬ್ಬಿನ ಬೆಳೆಯಾಗಿರುತ್ತದೆ. ಈ ವರ್ಷ ಸುಮಾರು ನಲವತ್ತು ಲಕ್ಷ ಟನ್‌ಗಳಷ್ಟು ಬೆಳೆದು ನಿಂತ ಕಬ್ಬಿನ ಫಸಲಿರುತ್ತದೆ. ಜಿಲ್ಲೆಯಲ್ಲಿರುವ ಮೂರು ಸಕ್ಕರೆ ಕಾರ್ಖಾನೆಗಳು ಹಾಗೂ ಸಹಸ್ರಾರು ಸಂಖ್ಯೆಯಲ್ಲಿರುವ ಕಬ್ಬಿನ ಗಾಣಗಳು ಈ ಕಬ್ಬನ್ನು ಅರೆದರೂ ಸಹ ಸುಮಾರು ಹದಿನೈದರಿಂದ ಇಪ್ಪತ್ತು ಲಕ್ಷ ಟನ್ ಕಬ್ಬಿಗೆ ಪರ್ಯಾಯ ವ್ಯವಸ್ಥೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಜೂನ್-ಜುಲೈ ತಿಂಗಳಲ್ಲಿ ಕಬ್ಬನ್ನು ನೆಡುವ ಪದ್ಧತಿ ಇದೆ. ರೈತರು ಈ ಬೆಳೆಯಿಂದ ನಷ್ಟವನ್ನು ಅನುಭವಿಸುತ್ತಾ ಇದ್ದಾರೆ. ಈ ಜಿಲ್ಲೆಯಲ್ಲಿರುವ ಐದು ಖಂಡಸಾರಿ ಕಾರ್ಖಾನೆಗಳೂ ಸಹ ಇನ್ನೂ ಪ್ರಾರಂಭವಾಗಿಲ್ಲ. ಆದುದರಿಂದ ಇದು ಇನ್ನೂ ಸಮಸ್ಯೆಯಾಗಿದೆ. ಪರಿಸ್ಥಿತಿ ದಿನೇ ದಿನೇ ಉಲ್ಬಣವಾಗುತ್ತಿದೆ. ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಚಿಪ್ಪಿಗೆ ನೀಡದೆ ರೈತರು ಸ್ವಂತವಾಗಿ ಬೆಳೆದ ಕಬ್ಬನ್ನು ಪಕ್ಕದ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಗೆ ಸಾಗಿಸಲು ರೈತರಿಗೆ ಪರವಾನಿಗೆ ಇರುವುದಿಲ್ಲ. ಹಾಗೂ ಸರ್ಕಾರದಿಂದ ಟನ್ ಕಬ್ಬಿಗೆ ನಿಗಧಿಯಾಗುತ್ತಿದ್ದ ಕನಿಷ್ಟ ಬೆಂಬಲ ಬೆಲೆ ಇನ್ನೂ ನಿಗಧಿಯಾಗಿದೆ ಮತ್ತು ಗೊಬ್ಬರದ ಬೆಲೆ ಹೆಚ್ಚಳದಿಂದ ರೈತ ಸಮುದಾಯ ಚಿಂತೆಗೊಳಗಾಗಿದೆ. ಆದುದರಿಂದ ಮಂಡ್ಯ ಜಿಲ್ಲೆ ರೈತರು ಸ್ವಂತವಾಗಿ ಬೆಳೆದಿರುವ ಕಬ್ಬಿನ ಫಸಲಿಗೆ ಪರ್ಯಾಯ ವ್ಯವಸ್ಥೆ ಮಡಾಬೇಕೆಂದೂ ಹಾಗೂ ವೈಜ್ಞಾನಿಕವಾದ ಕನಿಷ್ಟ ಬೆಂಬಲ ಬೆಲೆ ಶೀಘ್ರವಾಗಿ ನಿಗದಿ ಮಾಡಬೇಕೆಂದೂ ಒತ್ತಾಯಿಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರ ಪ್ರಶ್ನೆಗೆ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.